ಮಲ್ಪೆ, ಕಾಪು, ಸುರತ್ಕಲ್, ಸೋಮೇಶ್ವರ, ಕಟೀಲು, ಬೇಂದ್ರೆತೀರ್ಥ, ಶಿರಾಡಿ ಉಪ್ಪಿನಂಗಡಿ ಇತ್ಯಾದಿಗಳು ಸೇರಿವೆ ತಣ್ಣೀರು ಬಾವಿಯನ್ನೂ ಸಹ ಗುರುತಿಸಲಾಗಿದೆ

ಆ) ಅವುಗಳ ಅಭಿವೃದ್ಧಿಗಾಗಿ ಸರ್ಕಾರದ ಯೋಜನೆಗಳು ಏನು?

ಸದರಿ ಸ್ಥಳಗಳಲ್ಲಿ ಪ್ರವಾಸಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ

ಇ) ಕರಾವಳಿ ಜಿಲ್ಲೆಗಳಲ್ಲಿ ಪ್ರವಾಸೋದ್ಯಮಕ್ಕೆ ಗರಿಷ್ಠ ಅದ್ಯತೆಯನ್ನು ನೀಡುವ ಮೂಲಕ ಪ್ರವಾಸೋದ್ಯಮಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿ ತನ್ಮೂಲಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಕುರಿತು ಕ್ರಿಯಾ ಯೋಜನೆಗಳನ್ನು ಸರ್ಕಾರ ಸಿದ್ದಪಡಿಸಿದೆಯೇ, ಕ್ರಿಯಾ ಯೋಜನೆಗಳನ್ನು ಸಿದ್ದಪಡಿಸಲಾಗುತ್ತಿದೆ

ಈ) ಹೌದಾದ್ದಲ್ಲಿ, ಅದರ ವಿವರಗಳೇನು?

ಕರಾವಳಿ ಕಡಲು ತೀರ ಪ್ರದೇಶಗಳಿಗೆ ಹೈಮಾಸ್ಕ್ ಲ್ಯಾಂಪ್‌ಗಳ ಅಳವಡಿಕೆ, ಮಕ್ಕಳ ಉದ್ಯಾನವನ ನಿರ್ಮಾಣ, ಕಾಲುದಾರಿಗಳ ನಿರ್ಮಾಣ, ಲ್ಯಾಂಡ್ ಸ್ಕೇಪಿಂಗ್ ಹಾಗೂ ಪ್ರವಾಸಿಗರು ಕೂರಲು ಬೆಂಚುಗಳ ಅಳವಡಿಕೆ ಇತ್ಯಾದಿಗಳನ್ನು ಒಳಗೊಂಡಂತೆ ಕ್ರಿಯಾ ಯೋಜನೆಗಳನ್ನು ತಯಾರಿಸಲಾಗುತ್ತಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1124(1511)**
ಸದಸ್ಯರ ಹೆಸರು	**ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ)**
ಉತ್ತರಿಸುವ ಸಚಿವರು	**ಶ್ರೀ ಬಿ ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯಅಭಿವೃದ್ಧಿ ಸಚಿವರು)**

ಅ) ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಕಳೆದ 2 ವರ್ಷಗಳಿಂದ ಕೇಂದ್ರ ಸರ್ಕಾರದಿಂದ ಬಂದಿರುವ ಹಣದ ಮೊತ್ತವೆಷ್ಟು,

ಕಳೆದ 2 ವರ್ಷಗಳಲ್ಲಿ ಕೇಂದ್ರದಿಂದ ಬಂದಿರುವ ಮೊತ್ತವು ರೂ 2,877 63 ಲಕ್ಷಗಳು

ಆ) ಇದೇ ಅವಧಿಯಲ್ಲಿ ರಾಜ್ಯ ಸರ್ಕಾರವು ತನ್ನ ಪಾಲಿನ ಎಷ್ಟು ಮೊತ್ತದ ಹಣವನ್ನು ಪ್ರವಾಸೋದ್ಯಮ ಅಭಿವೃದ್ಧಿಗಾಗಿ ವೆಚ್ಚ ಮಾಡಿದೆ,

ವೆಚ್ಚ ಮಾಡಲಾದ ರಾಜ್ಯದ ಅನುದಾನ ರೂ 801 00 ಲಕ್ಷಗಳು

ಇ) ಇದೇ ಅವಧಿಯಲ್ಲಿ ರಾಜ್ಯದ ಯಾವ ಯಾವ ಪ್ರವಾಸೋದ್ಯಮ ಸ್ಥಳಗಳನ್ನು ಅಭಿವೃದ್ಧಿಪಡಿಸಲಾಗಿದೆ, (ಪೂರ್ಣ ವಿವರಗಳನ್ನು ಜಿಲ್ಲಾವಾರು ಒದಗಿಸುವುದು)

ಅಭಿವೃದ್ಧಿಪಡಿಸಲಾದ ಸ್ಥಳಗಳ ವಿವರ ಈ ಕೆಳಕಂಡಂತಿದೆ –

ಜಿಲ್ಲೆ	ಪ್ರವಾಸಿ ತಾಣ	ಮಾಡಲಾದ ವೆಚ್ಚ (ಲಕ್ಷಗಳಲ್ಲಿ)
ಮಂಡ್ಯ	ಮೇಲುಕೋಟೆ	20 00
ಹಾಸನ	ಶ್ರವಣಬೆಳಗೊಳ	317 00
ಹಾಸನ	ಹಳೇಬೀಡು	50 00
ಬಾಗಲಕೋಟೆ	ಬಾದಾಮಿ, ಐಹೊಳೆ, ಪಟ್ಟದಕಲ್ಲು ವಲಯದಲ್ಲಿ ಸೈನೇಜುಗಳ ಶೌಚಾಲಯಗಳ ನಿರ್ಮಾಣ	88 00 100 00
ಕಾರವಾರ	ಟಾಗೋರ್ ಕಡಲು ತೀರ	125 00
ದ ಕ	ಪಿಲಿಕುಲ	170 00
ಚಿತ್ರದುರ್ಗ ಮತ್ತು ಉತ್ತರ ಕನ್ನಡ	ಕೋಟೆಗೆ ಹೊನಲು ಬೆಳಕು ಸೈನೇಜು ತಾಣದ ಅಭಿವೃದ್ಧಿ ಕಾಮಗಾರಿ ಓಂ ಬೀಚ್	20 00 20 00 50 00 100 00
ಮೈಸೂರು	ತಲಕಾಡು	98 00
ಶಿವಮೊಗ್ಗ ಮತ್ತು ಕೊಡಗು	ಜೋಗ್ ಅಭಿವೃದ್ಧಿಗಾಗಿ ಪ್ರಾಧಿಕಾರಕ್ಕೆ 5 ಶೌಚಾಲಯಗಳು	370 00 50 00
ಕೋಲಾರ	2ಶೌಚಾಲಯಗಳು	16 00
ಬೆಂಗಳೂರು (ಗ್ರಾ)	ಕೆಂಗಲ್	8 00

ಈ) ಇದಕ್ಕೆ ವೆಚ್ಚ ಮಾಡಲಾದ ಹಣದ ವಿವರಗಳೇನು, ಉತ್ತರ (ಇ)ರಲ್ಲಿ ನೀಡಲಾಗಿರುವಂತೆ

ಉ) ಇನ್ನೂ ಎಷ್ಟು ಕಾಮಗಾರಿಗಳು ಬಾಕಿ ಇವೆ ಹಾಗೂ ಇವುಗಳನ್ನು ಪೂರ್ಣಗೊಳಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಲಿಂಗನಮಕ್ಕಿ ಜಲಾಶಯದ ಬಳಿ ಹಾಗೂ ಜೋಗ್ ಜಲಪಾತದ ಬಳಿ ಕಾಮಗಾರಿಗಳು ಜೋಗ್ ಅಭಿವೃದ್ಧಿ ಪ್ರಾಧಿಕಾರದ ಮೂಲಕ ಕೈಗೊಳ್ಳಲಾಗುತ್ತಿದೆ ಕಾರವಾರದ ಟಾಗೋರ್ ಬೀಚ್ ಅಭಿವೃದ್ಧಿಯನ್ನು ಜಿಲ್ಲಾಡಳಿತದ ವತಿಯಿಂದ ಅಂತೆಯೇ, ಬೇಲೂರಿನ ಬಳಿ ಅಂತರರಾಷ್ಟ್ರೀಯ ಮಟ್ಟದ ಹೋಟೆಲ್ ನಿರ್ಮಾಣವನ್ನು ಖಾಸಗಿ ಸಹಭಾಗಿತ್ವದಡಿ ಹೀಗೆ ವಿವಿಧ ಏಜೆನ್ಸಿಗಳ ಸಹಕಾರದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳು ಇನ್ನೂ ಪೂರ್ಣವಾಗಿರುವುದಿಲ್ಲ ಇವುಗಳ ಬಗ್ಗೆ ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಿ ತ್ವರಿತವಾಗಿ ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗಿದೆ ನಿವೇಶನ/ಜಮೀನುಗಳು ಅಗತ್ಯವಿರುವ ಯೋಜನೆಗಳಿಗೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಸಂಪರ್ಕಿಸಿ ತ್ವರಿತವಾಗಿ ಜಮೀನನ್ನು ಒದಗಿಸುವಂತೆ ಕೋರಲಾಗಿದೆ ಇಲಾಖೆಯು ಯೋಜನೆಗಳನ್ನು ಜಾರಿಗೊಳಿಸಲು ಶೀಘ್ರ ಕ್ರಮಗಳನ್ನು ಕೈಗೊಳ್ಳುತ್ತಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1126(1513)**
ಸದಸ್ಯರ ಹೆಸರು	**ಶ್ರೀ ಮಲ್ಲಿಕಾರ್ಜುನ ಎಸ್ ಖೂಬಾ (ಬಸವಕಲ್ಯಾಣ)**
ಉತ್ತರಿಸುವ ಸಚಿವರು	**ಶ್ರೀ ಎಂ ಪಿ ಪ್ರಕಾಶ್ (ಮಾನ್ಯ ಗೃಹ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)**

ಅ) ರಾಜ್ಯದಲ್ಲಿ ಶಾಸಕರುಗಳು, ಸಚಿವರು ಹಾಗೂ ರಾಜ್ಯಪಾಲರು ಹಾಗೂ ನ್ಯಾಯಾಧೀಶರುಗಳನ್ನು ಹೊರತು–ಪಡಿಸಿದಂತೆ ಇತರೆ ಯಾವ ಯಾವ ವ್ಯಕ್ತಿಗಳಿಗೆ, ರಾಜಕೀಯ ಪಕ್ಷಗಳ ಮುಖಂಡುಗಳಿಗೆ ಪೊಲೀಸ್ ಇಲಾಖೆಯಿಂದ ಅಂಗರಕ್ಷಕರು ಸೇರಿದಂತೆ ಯಾವ ಯಾವ ದರ್ಜೆಯ ಪೊಲೀಸ್ ಭದ್ರತೆಯನ್ನು ಒದಗಿಸಲಾಗಿದೆ (ವ್ಯಕ್ತಿಯ ವಿವರಗಳನ್ನು ಒದಗಿಸುವುದು)

ಪೊಲೀಸ್ ಭದ್ರತೆ ಒದಗಿಸಿರುವ ವ್ಯಕ್ತಿಗಳ ವಿವರಗಳನ್ನು ಇದಕ್ಕೆ ಲಗತ್ತಿಸಿರುವ ಅನುಬಂಧ–'ಎ' ಮತ್ತು 'ಬಿ' ನಲ್ಲಿ ನೀಡಲಾಗಿದೆ

ಆ) ಯಾವ ಮಾನದಂಡದ ಮೇಲೆ ಇವರುಗಳಿಗೆ ಭದ್ರತೆಯನ್ನು ಒದಗಿಸಲಾಗುತ್ತಿದೆ?